Regd No BC 155 24-10-1969

SATYAVADI Daily, MYSORE ★ 53 rd Year of Publication

ಸುವರ್ಣ ಮಹೋತ್ಸವ ನಡೆಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ತೆರಮನೆ ಸಿರಸ್ತೇದಾರ್ ಎಂ. ನಿ ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕಾಂಗ್ರೆಸ್ ಅಧಃಕತೆ = ಭಾರೀ ಸಮಸ್ಯೆಯಾಗಿದೆ

ಶೀಘ್ರ

ಕನ್ನಡ ಚಳವಳಿ

ಭದ್ರಾವತಿ— ಇಲ್ಲಿಯ ಕಸಕ ಮಂಟಪದಲ್ಲಿ ಕನ್ನಡ ಚಳವಳಿ ನಾಯಕರೂ ಶಾಸನಸಭಾ ಸದಸ್ಯರೂ ಆದ ಶ್ರೀ ವಾಟಾಳ್ ನಾಗರಾಜ್‌ರವರು ಮಾಡಿದ ಭಾಷಣದಲ್ಲಿ – ಕನ್ನಡಿಗರು ಕನ್ನಡ ಸಂಸ್ಥೆಗಳ ಪ್ರಶ್ನೆಯದಲ್ಲಿ ಏಕ್ಯವಾದಲ್ಲಿ, 1972ರ ಹೊತ್ತಿಗೆ ರಾಜ್ಯಾದ್ಯಂತ ಕನ್ನಡ ಚಳವಳಿ ಹರಡಿ ಕನ್ನಡ ರಾಜ್ಯ ಸ್ಥಾಪನೆಯಾಗುವದೆಂದು ಹೇಳಿದರು

★

ರಥೋತ್ಸವ

ಮೈಸೂರು— ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವವು ನಿನ್ನೆ ಬೆಟ್ಟದಲ್ಲಿ ನಿನ್ನೆ ವೈಭವವಾಗಿ ನೆರವೇರಿತು. ಸಹಸ್ರಾರು ಜನ ವೀಕ್ಷಿಸಿದರು. ಶ್ರೀಮನ್ಮಹಾರಾಜರವರು ಪೂಜೆ ಸಲ್ಲಿಸಿ, ಸ್ವಲ್ಪ ದೂರ ರಥವನ್ನು ಎಳೆದರು. ದೇವಾಲಯದ ಸುತ್ತ ರಥೋತ್ಸವ ನಡೆಯಿತು. ಅರಮನೆ ಬತೇರಿಯಿಂದ 21 ಕುಶಾಲ ತೋಪುಗಳು ಹಾರಿಸಲ್ಪಟ್ಟವು.

★

ಭೂಮಿ ಹಂಚಿಕೆ

ಮಂಗಳೂರು— ಗಾಂಧೀಜೀ ಶತಮಾನೋತ್ಸವ ಸಂಬಂಧದಲ್ಲಿ 550 ಮಂದಿ ಬಡಕಟ್ಟು, ಕೋಮು, ಜನಾಂಗದವರಿಗೆ 689 ಎಕ್ರೆ ಭೂಮಿ ಹಂಚಿ ಸಾಗುವಳಿ ಚೀಟು ಕೊಡಲ್ಪಟ್ಟಿತು.

○

ಭಾರತ – ಚೀನಾ

ಮಿಲಾನ್— ಭಾರತವು ಚೀನಾದೊಡನೆ ಅರ್ಥ ಸಹಕಾರ ಇತ್ಯಾದಿ ಬಗ್ಗೆ ಮಾತುಕತೆ ನಡೆಸಲು ಸಿದ್ದವಿದೆಯೆಂದು ಪ್ರಧಾನಿ ಇಂದಿರಾರವರು ಹೇಳಿದರು.

ಚಿಂತಾಜನಕ ಸ್ಥಿತಿ

ಅಮೃತಸರ— ಚಂಡೀಘರಕ್ಕಾಗಿ ಉಪವಾಸ ಮಾಡುತ್ತಿರುವ ಶ್ರೀ ಫೆರಮಾನರ ಸ್ಥಿತಿ ಚಿಂತಾಜನಕವಾಗಿದೆ.

★

ವಿಪರೀತ ಅಧಿಕಾರ

ಗುಲ್ಬರ್ಗ— ಭಾರತದಲ್ಲಿ ಪ್ರಜಾರಾಜವು ಇನ್ನೂ ಬೆಳೆದುವ ಸ್ಥಿತಿಯಲ್ಲಿರುವಾಗ ಕಾರ್ಯಾಂಗವು ಹಿಂದಿನ ಕಾಲದ ರಾಜರಷ್ಟು ವಿಪರೀತ ಅಧಿಕಾರ ವಹಿಸಿಕೊಂಡಿದೆ, ಎಂದು ಭಾರತದ ಮಾಜಿ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ ಸುಬ್ಬರಾವ್‌ರವರು ವಕೀಲ ಸಂಘದ ಭೋಜನ ಕೂಟದಲ್ಲಿ ಹೇಳಿದರು.

ಬಲವಾದ ಶಾಸನಗಳಿವೆ !

ಶ್ರೀನಗರ— ಕೋಮುವಾರನ್ನು ಮಟ್ಟ ಹಾಕಲು ಎಲ್ಲ ತೀವ್ರ ಕ್ರಮಗಳನ್ನೂ ಕೈಗೊಳ್ಳಬೇಕೆಂದು ಕೇಂದ್ರ ವಾರ್ತಾ ಮಂತ್ರಿ ಶ್ರೀ ಸತ್ಯನಾರಾಯಣ್ ಸಿನ್ಹರು ರಾಜ್ಯಗಳ ವಾರ್ತಾ ಮಂತ್ರಿಗಳ ಸಮ್ಮೇಳನದಲ್ಲಿ ಹೇಳಿದರು – ನಮ್ಮಲ್ಲಿ ಬಲವಾದ ಶಾಸನಗಳಿಗೆ, ಆದರೆ ಅವುಗಳ ಉಪಯುಕ್ತತೆ ಬಲವಾಗಿಲ್ಲವೆಂದರು.

ಕೋಮುವಾರು

ಅಹಮದಾಬಾದು— ಕೋಮುವಾರು ದ್ವೇಷ ತ್ಯಜಿಸಿ, ರಾಷ್ಟ್ರೀಯ ಐಕ್ಯತೆ ಬಲಗೆದಳಿಸಬೇಕೆಂಬ ಬಗ್ಗೆ ಜನತೆಯಲ್ಲಿ ತಿಳುವಳಿಕೆ ಉದ್ದಟ್ಟು ಮಾಡಬೇಕೆಂಬ ಖ್ಯಾತ ಅಬ್ದುಲ್ ಗಫಾರ್ ಖಾನರ ಯೋಜನೆ ವಿಚಾರದಲ್ಲಿ, ಕಾಲೇಜು ಪ್ರಿನ್ಸಿಪಾಲರು, ಪ್ರೊಫೆಸರರು, ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಘದ ಪ್ರತಿನಿಧಿಗಳೂ ಖಾನರೊಂದಿಗೆ ಚರ್ಚಿಸಿದರು — "ದೇಶದ ವಿವಿಧ ಜನಾಂಗದವರು, ಕೋಮುಗಳವರೂ ಸೌಹಾರ್ದದಿಂದ ಜೀವಿಸಿದರೆ, ದೇಶವು ತೀವ್ರದಲ್ಲಿ ಪ್ರಗತಿಗೊಳ್ಳುವದೆಂದು" ಇವರು ತಿಳಿಸಿದರು

●

ಹೊಸ ರಾಜ್ಯಪಾಲರು

ಬೆಂಗಳೂರು— ರಾಜಭವನದ ಮುಖ್ಯ ದ ಸಭಾಂಗಣದಲ್ಲಿ ಶ್ರೀ ಧರ್ಮ ವೀರ್ ರವರು ರಾಜ್ಯಪಾಲರಾಗಿ ನಿನ್ನೆ ಸಂಜೆ ಪ್ರಮಾಣವಚನ ಸ್ವೀಕರಿಸಿದರು.

○

ಮಳೆ ಹಾವಳಿ

ಮದರಾಸು— ನಾಲ್ಕು ದಿನಗಳ ಭೀಕರ ಮಳೆಯಿಂದ 21 ಸಾವಿರ ಜೋಪಡಿಗಳ ನಿವಾಸಿಗಳು ನಿರಾಶ್ರಿತರಾಗಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆಗೆ

ನವದೆಹಲಿ— ಪ್ರಧಾನಿಯವರ ಗುಂಪು ಶ್ರೀ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷತೆಯಿಂದ ತೆಗೆದುಹಾಕುವವರೆಗೆ ತೃಪ್ತಗೊಳ್ಳುವಂತಿಲ್ಲವೆಂದು ಹೇಳಲಾಗಿದೆ – ಅವರನ್ನು ತೆಗೆಯುವದೇ ಈಗಿನ ಪ್ರಯತ್ನವಾಗಿದ್ದು, ಮುಂದಿನ ಅಧ್ಯಕ್ಷರ ವಿಷಯ ನಂತರ ಯೋಚಿಸಲಾಗುವದೆಂದು ಹೇಳಲಾಗುತ್ತಿದೆ.

★

ಮಂತ್ರಿಗಳ ಸತ್ಯ ವಾಕ್

ಬೆಂಗಳೂರು— ಸಭ್ಯತೆ, ಸತ್ಯಸಂಧತೆ, ಪ್ರಾಮಾಣೀಕತೆ ಇಲ್ಲದ್ದು ರಾಜಕೀಯದಲ್ಲಿ ಕೆಲಸಮಾಡಲು ಸಂತೋಕರವಲ್ಲ ; ರಾಜಕೀಯವು ಒಬ್ಬ ಪಟಿಂಗನ ಕಡೇ ಆಶ್ರಯ ಎಂಬುದರಲ್ಲಿ ತುಂಬಾ ಸತ್ಯತೆಯಿದೆ ಎನ್ನಿಸುತ್ತದೆ ನನಗೆ, ಎಂದೂ ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ವಿಶ್ವವಿದ್ಯಾನಿಲಯಕ ಕೇಂದ್ರದ ರಾಷ್ಟ್ರೀಯ ತರಬೇತಿ ಕಾರ್ಯಕ್ರಮ ಉದ್ಘಾಟಿಸುತ್ತಾ ಹೇಳಿದರು.

★

ಜಪಾನಿಗೆ ಕಬ್ಬಿಣದ ಅದಿರು

ಟೋಕಿಯೋ— ಭಾರತವು ಜಪಾನಿಗೆ 200 ಮಿಲಿಯ ಟನ್‌ಗಳಿಗೂ ಹೆಚ್ಚು ಕಬ್ಬಿಣದ ಅದಿರನ್ನು 15-ವರ್ಷಗಳಲ್ಲಿ ಸರಬರಾಜು ಮಾಡುವುದಾಗಿ ತಿಳಿಸಿದೆಯೆಂದು ಜಪಾನ್ ಉಕ್ಕು ಕೈಗಾರಿಗೆ ವಕ್ತಾರರೊಬ್ಬರು ಹೇಳಿದರು.

★

ರಾಜಸಭಾಭೂಷಣ

ಬೆಂಗಳೂರು— ಬೆಂಗಳೂರು ಅರಮನೆ ಸೂಪರಿಂಟೆಂಡೆಂಟ್ ಶ್ರೀ ಜೀನಾಥಭಾಟೇಲರಿಗೆ ದಸರಾ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರು ರಾಜಸಭಾಭೂಷಣ ಬಿರುದನ್ನು ದಯಪಾಲಿಸಿರುವರು.

ಶಾ. 24–10–69ನೇ ಶುಕ್ರವಾರದಿಂದ ಆಮೋಘ

... ದಿನ 3 ಆಟಗಳು .... ಪ್ರಾರಂಭ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ

ದಿನ : 2–30, 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ

ಟೋನಿವಾಕರ್‌ರವರ ವರ್ಷದ ಅತ್ಯುನ್ನತ ಪತ್ತೇದಾರಿ ಸಂಗೀತಭರಿತ

ವರ್ಣರಂಜಿತ ಚಿತ್ರ ಬಾ ಜಿ (ಹಿಂದಿ)

ಪಾತ್ರ– ಧರ್ಮೇಂದ್ರ, ವಹೀದಾ ರೆಹಮಾನ್, N.A. ಅನ್ಸಾರಿ, ಮತ್ತು ಜಾನಿವಾಕರ್

ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ – ನಿರ್ದೇಶನ: ಮೋನಿ ಭಟ್ಟಾಚಾರ್ಯಜೀ

ಗಾಂಧೀಜೀ ಅಮೃತವಾಣಿ

★★

ಮನುಷ್ಯಕೋಟಿ ಬಳಿ ಇರುವ ಎಲ್ಲಕ್ಕೂ ಪ್ರಬಲ ಅಸ್ತ್ರ ಅಹಿಂಸೆ.

——

ಎಲ್ಲಾ ಧರ್ಮಗಳೂ ಒಂದೇ ಗುರಿಯತ್ತ ಧಾವಿಸುತ್ತಿರುವ ವಿವಿಧ ಮಾರ್ಗಗಳು : ಆದೇ ಗುರಿಯನ್ನು ಮುಟ್ಟುವುದೇ ನಮ್ಮ ಧ್ಯೇಯವಾಗಿರುವಕನಕ ನಾವು ಬೇರೆ ಬೇರೆ ಮಾರ್ಗ ಅನುಸರಿಸಿದರೆ ತಪ್ಪೇನು ?

——

ಹಿಂದುವು ಇನ್ನೂ ಉತ್ತಮ ಹಿಂದುವಾಗಲು, ಮುಸಲ್ಮಾನನು ಇನ್ನೂ ಉತ್ತಮ ಮುಸಲ್ಮಾನನಾಗಲು, ಕ್ರೈಸ್ತನು ಇನ್ನೂ ಉತ್ತಮ ಕ್ರೈಸ್ತನಾಗಲು ನಾವು ಪ್ರಯತ್ನಿಸಬೇಕು.

———

ಅಂತರಾತ್ಮನ ಕೂಗೇ ಭಗವಂತನ ಕೂಗು ; ಪ್ರತಿಯೊಂದು ಕಾರ್ಯ ಮತ್ತು ವಿಚಾರಗಳ ಋಜುತ್ವದ ಏಕೈಕ ತೀರ್ಪನ್ನು ಅಂತರಾತ್ಮನೊಬ್ಬನೇ ನೀಡುವನು.

———

ಉತ್ತಮ ಮನೆಗೆ ಸರಿಸಮಾನವಾದ ಶಾಲೆಯೊಂದಿಲ್ಲ : ಪ್ರಾಮಾಣಿಕ ಮತ್ತು ಸದ್ಗುಣ ತಂದೆತಾಯಿಗಳಿಗೆ ಸಮಾನವಾದ ಗುರುಗಳಿಲ್ಲ.

ವುಡ್‌ಲ್ಯಾಂಡ್ ಜಯಪ್ರದ 3ನೇ ವಾರ

ಶನಿ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶೀಕಪೂರ್ ಬಬೀತಾ ಜಾನೀವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 3ನೇ ವಾರ

.... ಅಮೋಘ ತಮಿಳು ಚಿತ್ರ ....

ಎಂಗವೀಟ್ಟು ಪಿಳ್ಳೈ

ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)

ದಿನ 3 ಆಟಗಳು

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆರೂ. 2

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಕೈಜೋಡಿಸಿ ನಡೆಯಿರಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

ದೇಶದ ಹಿತಕಾಗಿ

ಕುಟುಂಬ ಯೋಜನೆ

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapura, Mysore 4.